ಪದ್ಧತಿಯನ್ನು ಹೊಸದಾಗಿ ಜಾರಿಗೆ ತಂದು ರಾಜ್ಯ ಸರ್ಕಾರಕ್ಕೆ ಯಾವ ಬೆಳೆ ಬೇಕಾದರೂ ಬೆಳೆವಿಮೆ ಚೌಕಟ್ಟಿನಲ್ಲಿ ಅಳವಡಿಸಿ ಕೊಟ್ಟಮೇಲೆ ಅದರ ಉಪಯೋಗ ಆಗಬೇಕು. ಈ ಕಡಗೆ ತಾವು ವಿಶೇಷ ಗಮನವನ್ನು ಕೊಡಬೇಕು. ಮತ್ತೆ ಈಗ ಏನು ಅನ್ಯಾಯವಾಗಿದೆ ಎಂದರೆ, ಹೋದವರ್ಷ ಬೆಳೆವಿಮೆ ಹಣ ಸಿಕ್ಕಿಲ್ಲ. ಅಣಿವಾರು ವ್ಯವಸ್ಥೆ ಏನಿದೆ ಅದು ಸರಿಯಲ್ಲ, ಅದು ಅವೈಜ್ಞಾನಿಕವಾದದ್ದು. ಅದನ್ನು ಸರಿಪಡಿಸುವಂತಹ ಪ್ರಾಮಾಣಿಕ ಪ್ರಯತ್ನವನ್ನು ನೀವು ಮಾಡಬೇಕು.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ತಮ್ಮ ಪೀಠದಲ್ಲಿ ಉಪಸ್ಥಿತರಾದರು)

ಜನ ಈ ಅಧಿವೇಶನದಲ್ಲಿ ಒಂದು ತೀರ್ಮಾನ ಆಗುತ್ತದೆಯೆಂದು ನಿರೀಕ್ಷೆ ಮಾಡುತ್ತಿದ್ದಾರೆ. ನೀವು ಉತ್ತರ ಕೊಡುವಂತಹ ಸಂದರ್ಭದಲ್ಲಿ ಬೆಳೆವಿಮೆ ಚೌಕಟ್ಟಿನಲ್ಲಿ ಬರುವಂತಹ ಎಲ್ಲಾ ರೈತರಿಗೆ ಬೆಳೆವಿಮೆ ಹಣ ಸಿಗುವ ರೀತಿಯಲ್ಲಿ ತಾವು ವಿಶೇಷವಾದಂಥ ಗಮನವನ್ನು ಕೊಡಬೇಕೆಂಬ ಒತ್ತಾಯವನ್ನು ಈ ಸಂದರ್ಭಲ್ಲಿ ನಾನು ಮಾಡುತ್ತಿದ್ದೇನೆ.

ಇನ್ನು, ಹನಿನೀರಾವರಿ ಬಗ್ಗೆ ಹನಿ ನೀರಾವರಿಯನ್ನು ಅಳವಡಿಸಿರುವುದರಲ್ಲಿ ರಾಷ್ಟ್ರದಲ್ಲಿ ನಾವು ಎರಡನೇ ಸ್ಥಾನದಲ್ಲಿದ್ದೇವೆ ಎಂದು ತಾವು ಹೇಳಿದ್ದೀರಿ. ತಾವು ಕೋಲಾರ ಜಿಲ್ಲೆಯಿಂದ ಬಂದಿದ್ದೀರಿ. ತಾವು ಎದ್ದುನಿಂತುಕೊಂಡು ಹೇಳಿ ಸ್ವಾಮಿ. ಕೋಲಾರ ಜಿಲ್ಲೆಯಲ್ಲಿ ಒಂದು-ಎರಡು ವರ್ಷಗಳ ಹಿಂದೆ ಮಾನ್ಯ ಎಸ್.ಎಂ. ಕೃಷ್ಣ ಅವರು ಮುಖ್ಯ ಮಂತ್ರಿಯಾಗಿದ್ದ ಕಾಲದಲ್ಲಿ ನೂರು ಪರ್ಸೆಂಟ್ ಸಬ್ಸಿಡಿಯನ್ನು ಕೋಲಾರ, ಬಿಜಾಪುರಕ್ಕೆ ಕೊಡುತ್ತೇವೆ ಎಂದು ಹೇಳಿದ್ದರು.

ಶ್ರೀ ಜೆ.ಸಿ. ಮಾಧುಸ್ವಾಮಿ: ಗಣ್ಯವ್ಯಕ್ತಿಗಳನ್ನು ಕರೆದುಕೊಂಡು ಬಂದಾಗ ಅವರನ್ನು ಸಭೆಗೆ ಪರಿಚಯ ಮಾಡಬೇಕು. ಸುಮ್ಮನೆ ಅವರನ್ನು ಕೂಡಿಸಿದ್ದು ತಪ್ಪು. ಅವರ ಪರಿಚಯವನ್ನಾದರೂ ಸಭೆಗೆ ಮಾಡಿಕೊಡಬೇಕು.

3. ಜರ್ಮನ್ ರಾಜ್ಯದ ಎಸ್.ಎ. ಪ್ರಾಂತ್ಯದ ಪಾರ್ಲಿಮೆಂಟರಿ ಸದಸ್ಯರ ಪರಿಚಯ:-

ಅಧ್ಯಕ್ಷರು: ಈಗ ಜರ್ಮನಿ ರಾಜ್ಯದ ಎಸ್.ಎ. ಪ್ರಾಂತ್ಯದ ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಜೋರ್‌ವ್ಯೂ ಆನ್ ಅನ್ನತಕ್ಕಂಥವರ ನಾಯಕತ್ವದಲ್ಲಿ ಅವರು ಮತ್ತು ಮೂರು ಜನ ಪಾರ್ಲಿಮೆಂಟ್ ಸದಸ್ಯರುಗಳು ನಮ್ಮ ಅಸೆಂಬ್ಲಿಯನ್ನು ನೋಡುವುದಕ್ಕೆ ದಯಮಾಡಿಸಿದ್ದಾರೆ.

(ಗಣ್ಯವ್ಯಕ್ತಿಗಳು ಎದ್ದು ನಿಂತುಕೊಂಡರು. ಸದಸ್ಯರುಗಳು ಮೇಜುತಟ್ಟಿ ಅವರಿಗೆ ಸ್ವಾಗತ ಕೋರಿದರು)

4. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ಮಂಡನಾ ನಿರ್ಣಾಯಕ ಮೇಲಿನ ಮುಂದುವರೆದ ಚರ್ಚೆ

ಶ್ರೀ ಬಿ.ಎಸ್. ಯಡಿಯೂರಪ್ಪ (ವಿ.ಪ. ನಾಯಕರು): ಹನಿ ನೀರಾವರಿ ಬಗ್ಗೆ ನಾನು ಹೇಳುತ್ತಿದ್ದೆ. ದಯಮಾಡಿ ತಾವು ಕೋಲಾರ ಜಿಲ್ಲೆಯಿಂದ ಬಂದಿದ್ದೀರಿ, ಇಲ್ಲಿ ಬಿಜಾಪುರ ಜಿಲ್ಲೆಯ ಶಾಸಕರು ಇದ್ದಾರೆ. ಕಳೆದ ಒಂದೂವರೆ ವರ್ಷದಲ್ಲಿ ನೂರು ಪರ್ಸೆಂಟ್ ಸಬ್ಸಿಡಿ ದುಡ್ಡನ್ನು ನೀವು ಕೊಟ್ಟಿದ್ದೀರಿ. ಆದರೆ ಅದು ಇನ್ನೂ ಗೊಂದಲದಲ್ಲಿದೆ. ನೂರು ಪರ್ಸೆಂಟ್ ಸಬ್ಸಿಡಿ ಕೊಡಬೇಕೇ ಬೇಡವೇ ಎನ್ನುವಂಥ ಗೊಂದಲದಲ್ಲಿ ನಮ್ಮ ಜಿಲ್ಲೆಯಲ್ಲಿ ಒಬ್ಬೊಬ್ಬ ಸಚಿವರು ಒಂದೊಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆ ವಿವರಕ್ಕೆ ನಾನು ಹೋಗುವುದಿಲ್ಲ. ಆದ್ದರಿಂದ ಉಳಿದಂಥ